ದಿನಾಂಕ 19-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿಯವರ ಪರವಾಗಿ ಶ್ರೀ ಕೆ.ಆರ್.ಆರ್.ಎ. ವಕೀಲರವರಿಂದಃ**

ನಿಪಿ.2 ನ್ನು ಸುಂದರ್ ಶೆಟ್ಟಿಯವರು 3 ನೇ ಪ್ರತಿವಾದಿಯವರಿಗೆ ವ್ಯವಸ್ಥಾ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿ. ಅದರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರ್ತಿಸಲಾಗಿದೆ. ಅದರ ಮೂಲ ದಾಖಲೆಯನ್ನು 3 ನೇ ಪ್ರತಿವಾದಿಯವರು ಈ ಹಂತದಲ್ಲಿ ಹಾಜರುಪಡಿಸಿರುತ್ತಾರೆ. ಅದನ್ನು ನಿಡಿ.6 ಎಂದು ಗುರ್ತಿಸಲಾಯಿತು. (ಈ ದಾಖಲೆಯನ್ನು 3 ನೇ ಪ್ರತಿವಾದಿಯವರು ಹಾಜರುಪಡಿಸಿರುತ್ತಾರೆ.) ಸಾಕ್ಷಿಯವರಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿರುತ್ತದೆ, ಸದ್ರಿ ಭಾವಚಿತ್ರದಲ್ಲಿ 3 ನೇ ಪ್ರತಿವಾದಿಯವರ ಪತ್ನಿ, 2 ನೇ ವ್ಯಕ್ತಿ ಸುಂದರ್ ಶೆಟ್ಟಿ 3 ನೇ ಪ್ರತಿವಾದಿಯವರ ತಂದೆ, 3 ನೇ ಪ್ರತಿವಾದಿಯವರ ತಂಗಿ ರೇಖಾ ಶೆಟ್ಟಿ, ತದ ನಂತರ ಶ್ರೀನಾಥ್ ರೇಖಾ ಶೆಟ್ಟಿಯವರ ಪತಿ, ಕೊನೆಯದಾಗಿ ಪ್ರಭಾಕರ ಶೆಟ್ಟಿಯವರು, ಮತ್ತೊಬ್ಬ ವ್ಯಕ್ತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಸದ್ರಿ ಭಾವಚಿತ್ರದಲ್ಲಿರುವ ವ್ಯಕ್ತಿಗಳನ್ನು ಗುರ್ತಿಸಿದ್ದರಿಂದ ಅದನ್ನು ಈಗ ಡಿ3 ಪರವಾಗಿ ನಿಡಿ.7 ಎಂದು ಗುರ್ತಿಸಲಾಯಿತು. ಇನ್ನೊಂದು ಪೋಟೋವನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಸುಂದರ್ ಶೆಟ್ಟಿ, ತದ ನಂತರ ರೇಖಾ ಶೆಟ್ಟಿ ಮತ್ತು ಅವರ ಗಂಡ ಶ್ರೀನಾಥ್ ಎಂದು ಭಾವಚಿತ್ರದಲ್ಲಿರುವ ವ್ಯಕ್ತಿಗಳನ್ನು ಗುರ್ತಿಸಿದ್ದರಿಂದ ಅದನ್ನು ಈಗ ಡಿ3 ಪರವಾಗಿ ನಿಡಿ.8 ಎಂದು ಗುರ್ತಿಸಲಾಯಿತು. ನಿಡಿ.6 ಮೂಲ ವ್ಯವಸ್ಥಾ ಪತ್ರದ ಅನುಸಾರವಾಗಿ 3 ನೇ ಪ್ರತಿವಾದಿ ಪ್ರಭಾಕರ ಶೆಟ್ಟಿಯವರಿಗೆ ಕೊಡಲಾಗಿರುತ್ತದೆಂದರೆ ಸರಿ. ವ್ಯಾಜ್ಯದ ಎ ಷೆಡ್ಯೂಲ್ ನಲ್ಲಿ ಕಾಣಿಸಿರುವ ಎಲ್ಲಾ ಸ್ವತ್ತುಗಳನ್ನು ಸಾಕ್ಷಿಯವರಿಗೆ ತೋರಿಸಿದ್ದು, ಆ ಎಲ್ಲಾ

ಆಸ್ತಿಗಳಲ್ಲಿ ¼ ಷೇರು 3 ನೇ ಪ್ರತಿವಾದಿಯವರಿಗೆ ನೀಡಿರುತ್ತೇವೆ. ¼ ಷೇರು 3 ನೇ ಪ್ರತಿವಾದಿಯವರಿಗೆ ಹೋಗಿದ್ದರೆ ನನ್ನದೇನೂ ಆಕ್ಷೇಪಣೆ ಇರುವುದಿಲ್ಲ.

ಈ ಹಂತದಲ್ಲಿ 7 ನೇ, 11 ನೇ ಮತ್ತು 12 ನೇ ಪ್ರತಿವಾದಿಯವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಅವರ ಪರವಾಗಿ ಮಾತ್ರ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.